ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 4 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ : "ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ. ಜೆ. ಜಾರ್ಜ್ (ನಗರಾಭಿವೃದ್ಧಿ ಮಂತ್ರಿಗಳು) (ಸಾರಿಗೆ ಮತ್ತು ಪಕ್ಷ ಮಂತ್ರಿಗಳ ಪರವಾಗಿ) :– ಮಾನ್ಯ ಉಪಾಧ್ಯಕ್ಷರೆಯವರೆ, "1990 ನೇ ಇಸವಿಯ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ : "1990 ರ ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜುಗಳ (ಸ್ವಾಧೀನ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರೈತರ ಸಾಲ ಮನ್ನಾ ಬಗ್ಗೆ ಧರಣಿ ಕುಳಿತಿರುವವರನ್ನು ಕುರಿತು :

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) :– ಮಾನ್ಯ ಉಪಾಧ್ಯಕ್ಷರೆಯವರೆ, ಇವತ್ತು ಬೆಳಿಗ್ಗೆಯಿಂದ ರೈತರ ಸಾಲದ ಸಮಸ್ಯೆಯ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಬಿ. ಜೆ. ಪಿ. ಪಕ್ಷದ ಸದಸ್ಯರು ಸರ್ಕಾರದಿಂದ ಬಂದಿರತಕ್ಕಂಥ ಉತ್ತರದಿಂದ ಅಸಮಾಧಾನಗೊಂಡು ಧರಣಿಯನ್ನು ಮಾಡುತ್ತಿದ್ದಾರೆ. ಈಗ ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಇರುತ್ತಾರೆ ಎಂದು ದೇಳಿ ಭಾವಿಸಿದ್ದೆ. ಆದರೆ ಅವರು ಇಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದ್ದಾರೆ. ಬೆಳಿಗ್ಗೆ ಈಗ ನಾವು ನಾಲ್ಕು ಜನ ಆಲ್ಲಿ ಕುಳಿತುಕೊಂಡಿದ್ದಾರೆ ಎಂದು ಹೇಳಿ ನಾವು ಸರ್ಮಕ್ಷದಿಂದ ಅದನ್ನು ಉದಾಹರಿಸಿ ಮಾಡಿ ಸಭೆಯನ್ನು ನಡೆಸಿಕೊಂಡು ಹೋಗಬಹುದು. ಆದರೆ ಅವರು ಒಂದು ಜವಾಬ್ದಾರಿ ರಾಷ್ಟ್ರೀಯ ಪಕ್ಷದ ಸದಸ್ಯರುಗಳಾಗಿದ್ದಾರೆ. ಅವರು ಹೇಳತಕ್ಕಂಥಾದ್ದು ಕೂಡಾ ರೈತರ ಒಂದು ಸಮಸ್ಯೆಯನ್ನು ಹೇಳಿದ್ದಾರೆಯೇ ಹೊರತು ಅಥವಾ ಅವರ ಪಕ್ಷದ ಪ್ರತಿಷ್ಠೆಯ ಪ್ರಶ್ನೆ ಎಂದು ಹೇಳಿ ಅವರು ಮಾಡಿಕೊಂಡಿಲ್ಲ ಎಂದು ಹೇಳಿ ನಾನು ತಿಳಿದಿದ್ದೇನೆ. ಈಗ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ಸಭಾನಾಯಕರು ಸೇರಿ ಅವರನ್ನು ನಾಳೆ ಬೆಳಿಗ್ಗೆ ಸಭೆ ಸೇರುವುದರೊಳಗಾಗಿ ಅವರನ್ನು ಕರೆಸಿ ಮಾತನಾಡಿ ಈ ಧರಣಿಯನ್ನು ಕೊನೆಗಾಣಿಸಲಿಕ್ಕೆ ಒಂದು ಪ್ರಯತ್ನವನ್ನು ಮಾಡಬೇಕು ಮತ್ತು ತಾವೂ ಸಹಿತ ಇದಕ್ಕೋಸ್ಕರ ಒಂದು ಪ್ರಯತ್ನವನ್ನು ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಬಿ. ಜೆ. ಪಿ. ಸದಸ್ಯರುಗಳು ಘೋಷಣೆಯನ್ನು ಕೂಗುತ್ತಿದ್ದರು.)

ಪ್ರತಿಭಟನೆಯನ್ನು ಮಾಡಲಿಕ್ಕೆ ನಾನಾ ವಿಧಾನಗಳು ಇರುತ್ತವೆ. ಅವರು ಅದನ್ನು ಮಾಡಿದ್ದಾರೆ. ಅವರ ಆಕ್ರೋಶವನ್ನು ಮತ್ತು ಅವರ ಸಮಸ್ಯೆಯನ್ನು ಪ್ರತಿಬಿಂಬಿಸಬೇಕು ಎಂದು ಹೇಳಿ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಅವರುಗಳು ಇಲ್ಲಿ ಮಾಡಿರುವುದೇನೆಂದರೆ ಇಲ್ಲಿ ಕುಳಿತುಕೊಳ್ಳದೆ ಅಲ್ಲಿ ಹೋಗಿ ಕುಳಿತುಕೊಂಡಿದ್ದಾರೆ. ಅವರ ಪಕ್ಷದ ಒಂದು ರಾಷ್ಟ್ರೀಯ ತೀರ್ಮಾನವಾದುದರಿಂದ ಎಂದು ಹೇಳಿ ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಅಂದರೆ ಧರಣಿಯನ್ನು We have accepted it as a norm in the House ನಾವು ಮಾಡಿದ್ದೇವೆ. ನೀವು ಮಾಡಿದ್ದೀರಿ. ಮುಂದೆ ಮಾಡುವವರು ಇದ್ದೇವೆ. ಈ ಕಡೆ ಇದ್ದಾಗ ನೀವುಗಳು ಕೂಡಾ ಮಾಡಿದ್ದೀರಿ. ಇವೆಲ್ಲ ಆಗತಕ್ಕಂಥದ್ದೆ. ಆದುದರಿಂದ ನಾನು ಅವರಿಗೆ ಸಂಪೂರ್ಣವಾಗಿ ನೀವು ಆಲ್ಲಿಯೇ ಕುಳಿತುಕೊಳ್ಳಿ, ನಾವು ಸಭೆಯನ್ನು ನಡೆಸಿಕೊಂಡು ಹೋಗುತ್ತೇವೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಮತ್ತೆ ಇದಕ್ಕಿಂತ ಮುಖ್ಯವಾಗಿ ಬಹಳ ಮಹತ್ವರವಾದ...

ಶ್ರೀ ಎಂ. ವೀರಪ್ಪ ಮೊಯಿಲಿ :– ಅವರು ಎಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳಿ ಅವರ ಚಾಯ್ಸ್‌ಗೆ ಬಿಟ್ಟುಬಿಟ್ಟಿದ್ದೇವೆ ನಾವು.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಹಾಗೆ ಆಗುವುದಿಲ್ಲ. ಇನ್ನು ಮೂರು ದಿನಗಳ ಕಾಲ ಸದನ ನಡೆಯ ತಕ್ಕಂಥ ಸಂದರ್ಭದಲ್ಲಿ ನಾವು ರಾಜ್ಯದ ಬಹಳ ಮಹತ್ವರವಾದ ಮಸೂನೆಗಳ ಬಗ್ಗೆ ನಾವು ಚರ್ಚೆ ಮಾಡು ವವರಿದ್ದೇವೆ. ಅವರು ಅವರ ಅಭಿಪ್ರಾಯಗಳನ್ನು ಕೊಡಲಿಕ್ಕೆ ಅವಕಾಶವಾಗುತ್ತದೆ. ನಾನು ಅವರಲ್ಲಿಯೂ ಸಹಿತ ಮನವಿಯನ್ನು ಮಾಡಿಕೊಂಡಿದ್ದೇನೆ. ಆದರೂ ಸಹಿತ ಸರ್ಕಾರದ ಧೋರಣೆಯನ್ನು ಒಪ್ಪಬೇಕು. ಎಂದು ನಾನು ಹೇಳುವುದಿಲ್ಲ. ಅದು ನಿಮ್ಮ ಪಕ್ಷಕ್ಕೆ ಮತ್ತು ನಿಮಗೆ ಸಂಬಂಧಪಟ್ಟಿರತಕ್ಕಂಥ ವಿಚಾರ ಆದರೆ ನಿಮ್ಮ ಪ್ರತಿಭಟನೆ ಏನು ಇದೆ, ಅದನ್ನು ಬಹಳ ಉಗ್ರವಾಗಿ ಮಾಡಿದ್ದೀರಿ. ಆದರಲ್ಲಿ ಯಶಸ್ವಿ ಸಹಿತ ಆಗಿದ್ದೀರಿ. ಪ್ರಚಾರ ಸಹಿತ ಸಿಗುತ್ತದೆ. ಆದರೆ ನಾವು ವಿರೋಧ ಪಕ್ಷದಲ್ಲಿ ಇಲ್ಲಿ ಕುಳಿತುಕೊಂಡು ನೀವು ಅಲ್ಲಿ ಕುಳಿತಾಗ ನಾವು ಇಲ್ಲಿ ಕೆಲಸ ಮಾಡತಕ್ಕಂಥದ್ದು ಬಹಳ ಕಷ್ಟವಾಗುತ್ತದೆ. ನಮಗೂ ಸಹಿತ ಕಷ್ಟವಾಗುತ್ತದೆ. ಮಾನ್ಯ ಉಪಾಧ್ಯಕ್ಷೀಣಿಯವರೆ, ಅದಕ್ಕೋಸ್ಕರ ಒಂದು ಸಹಾಯವನ್ನು ಮಾಡಬೇಕು. ದಯಮಾಡಿ ಸರ್ಕಾರ ದವರು, ಸಭಾನಾಯಕರು ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಅವರನ್ನು ಕರೆಸಿ ಮಾತನಾಡಿ ಈ ಧರಣಿಯನ್ನು ಇವತ್ತೇ ಕೊನೆಗಾಣಿಸುವುದಕ್ಕೆ ಅಥವಾ ನಾಳೆ ಬೆಳಿಗ್ಗೆ 11 ಗಂಟೆಗೆ ಸಭೆ ಸೇರುವುದರೊಳ ಗಾಗಿ ಇದನ್ನು ಮುಕ್ತಾಯ ಮಾಡಲಿಕ್ಕೆ ತಾವು ಕೂಡಾ ಸಹಾಯ ಮಾಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಉಪಾಧ್ಯಕ್ಷೀಣಿಯವರೆ, ಬೆಳಿಗ್ಗೆ ನಮ್ಮ ನಾಯಕರು ಮಾತ ನಾಡಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಕೂಡ ಆಗಿದೆ. ನಮ್ಮ ಸಿಂಧ್ಯಾರವರ ಪರಿಸ್ಥಿತಿ, ಸಂದಿಗ್ಧತೆ ನನಗೆ ಅರ್ಥವಾಗುತ್ತದೆ. ಏಕೆಂದರೆ ವಿರೋಧ ಪಕ್ಷದವರು ಅವರು ಸಾಲವನ್ನು ಮನ್ನಾ ಮಾಡಬೇಕು ಎಂದು ಅಲ್ಲಿ ಕುಳಿತುಕೊಂಡಾಗ ತಾವು ಇಲ್ಲಿ ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಆ ಸಂದಿಗ್ಧತೆ ನಮಗೂ ಅರ್ಥವಾಗುತ್ತದೆ. ಪ್ರಶ್ನೆ ಇಲ್ಲಿ ಏನಾಗಿದೆ ಎಂದು ಹೇಳಿದರೆ ಏನಾದರೂ ತಾವು ಹೇಳುವುದೂ ಸರಿ. ಏನಾದರೂ ಒಂದು ಹೊಸದಾದಂಥ ಸಮಸ್ಯೆ ಉದ್ಭವವಾಗಿದ್ದರೆ ಇವತ್ತಿನ ಮಟ್ಟಿಗೆ ಅಥವಾ ನಿನ್ನೆ ಯಮಟ್ಟಿಗೆ ಅವರು ಏನಾದರೂ ಅದಕ್ಕೆ ಒಂದು ತೀವ್ರವಾದಂಥ ಪ್ರತಿಭಟನೆಯನ್ನು ಕೊಡುವಂಥದ್ದು ಅವರು ಯಾವ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡಬೇಕು ಎಂದು ಅವರ ಆಯ್ಕೆಗೆ ಬಿಟ್ಟಿರತಕ್ಕಂಥದ್ದು ಆದರೆ ಇದು ಇದಕ್ಕೆ ಸಂಬಂಧಪಟ್ಟದ್ದಲ್ಲ. ಪ್ರತಿ ಸಾರಿಯೂ ಕೂಡ ನಮ್ಮ ಮಾನ್ಯ ಯಡಿಯೂರಪ್ಪನವರು ಹಾಗೂ ಅವರ ಸಂಗಡಿಗರು ಸಾಲ ಮನ್ನಾ ವಿಚಾರವನ್ನು ಆದರಲ್ಲೂ ಕೇಂದ್ರಕ್ಕೆ ಸಂಬಂಧಪಟ್ಟ ವಿಚಾರ ವನ್ನು ಪುನಃ ಪುನಃ ಎತ್ತುತ್ತಿದ್ದಾರೆ. ನಾವು ಪುನಃ ಪುನಃ ಹೇಳುತ್ತಿದ್ದೇವೆ, ಇದು ಕೇಂದ್ರದ ಯೋಜನೆಗೆ ಸಂಬಂಧಪಟ್ಟಿದ್ದು ಕೇಂದ್ರ ಈ ಯೋಜನೆಯನ್ನು ಅನುಷ್ಠಾನ ಮಾಡಲು ಕರ್ನಾಟಕ ರಾಜ್ಯ ಸರಕಾರದ ಪಾಲು ಏನು ಕೊಡಬೇಕು ಅದಕ್ಕೆ ನಾವು ಕಟಿಬದ್ಧರಾಗಿದ್ದೇವೆ. ಅದನ್ನು ಅನುಷ್ಠಾನ ಮಾಡುತ್ತಿದ್ದೇವೆ. ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ವಿಚಾರ ಮಾಡೋಣವೆಂದು ಹೇಳುತ್ತಲೇ ಬಂದಿದ್ದೇವೆ. ಸನ್ಮಾನ್ಯ ನಾಯಕರು ಆಗಲೇ ಹೇಳಿದ್ದಾರೆ. ರೈತರಿಂದ ಯಾವುದೇ ರೀತಿಯಿಂದ ಸಾಲ ವಸೂಲು ಮಾಡುತ್ತಿಲ್ಲವೆಂದು ಈಗಾಗಲೇ ನಮ್ಮ ನಾಯಕರು ಹೇಳಿಕೆ ಕೊಟ್ಟಿದ್ದಾರೆ. ಆದರ ಮೇಲೆಯೇ ಸಮಾಧಾನ ಆಗಬೇಕು. ಅದಕ್ಕಿಂತ ಏನಾದರೂ ಘಟನೆ ಉದ್ಭವವಾಗಿದ್ದರೆ ಅಂತಹ ಘಟನೆಗಳು ಅವರ ಹತ್ತಿರ ಇದ್ದರೆ ಸರ್ಕಾರ ಮುಕ್ತ ಮನಸ್ಸಿನಿಂದ ಅವರ ಜೊತೆಯಲ್ಲಿ ಬೇಕಾದರೆ ನಾಳೆಯೇ ಮಾತನಾಡ ಬಹುದು. ಅಥವಾ ಯಾವತ್ತಾದರೂ ಮಾತನಾಡಬಹುದು. ಇದು ಕೇಂದ್ರದ ಯೋಜನೆಗೆ ಸೀಮಿತ ವಾದಂತಹ ವಿಚಾರಕ್ಕೆ ಅವರು ಧರಣಿ ಕುಳಿತುಕೊಂಡಿದ್ದರೆ, ಧರಣಾ ಕುಳಿತುಕೊಳ್ಳುವುದು ಇಲ್ಲಿ ಅಲ್ಲ, ಬೋಟ್ ಕ್ಲಬ್‌ನಲ್ಲಿ ಅಥವಾ ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳಬೇಕು. ಇದು ಕೇಂದ್ರ ಯೋಜನೆಗೆ ಸಂಬಂಧಪಟ್ಟಿದ್ದು, ಇದು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಂಬಂಧಪಟ್ಟಿದ್ದು, ಇದು ನಬಾರ್ಡಿಗೆ ಸಂಬಂಧ ಪಟ್ಟಿದ್ದು, ಇದರ ಜೊತೆಯಲ್ಲಿ ನಾವು ವ್ಯವಹರಿಸುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರ ವ್ಯವಹಾರ ಮಾಡಬೇಕಾಗುತ್ತದೆ. ಆದ್ದರಿಂದ ಇಂತಹ ವ್ಯಾಪಕವಾದಂತಹ ಸಮಸ್ಯೆಗಳಿಗೆ ಕೆಲವು ಸೀಮಿತವಾದಂತಹ ಕಾರ್ಯಕ್ರಮಗಳಿಗೆ ವಿಧಾನ ಸೌಧದಲ್ಲಿ ಧರಣಿ ನಡೆಸಿದರೆ ಇದರಿಂದ ಸದನದ ಕಾರ್ಯಕಲಾಪಗಳಿಗೆ ಬಹಳ ತೊಂದರೆಯಾಗುತ್ತದೆ. ಅವರು ಹೇಳಿದ ಪ್ರಕಾರ ವಸೂಲಿ ಮಾಡಿ ಜಪ್ತಿ ಮಾಡಿ, ಅಕ್ರಮವಾದಂತಹ ಘಟನೆಗಳು ನಡೆದಿದ್ದು ಸನ್ಮಾನ್ಯ ಸದಸ್ಯರಲ್ಲಿ ಇದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅಂತಹ ಸಮಸ್ಯೆಗಳಿಗೆ ಮುಕ್ತ ಮನಸ್ಸಿನಿಂದ ಪರಿಹಾರ ಮಾಡೋಣ. ಕೇಂದ್ರ ಸರ್ಕಾರದ ನೀತಿಯನ್ನು ಬದಲಾವಣೆ ಮಾಡಬೇಕೆಂದು ಇಲ್ಲಿ ಪಟ್ಟು ಹಿಡಿದು ಕುಳಿತುಕೊಂಡರೆ ನಮ್ಮಿಂದ ಏನೂ ಮಾಡಲಿಕ್ಕೆ ಆಗುವುದಿಲ್ಲ.ಆದ ರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದು ಪ್ರತಿಪ್ಪೆ ಪ್ರಶ್ನೆ ಆಗಬಹುದು. ಮತ್ತು ಇದು ರಾಜ ಕೀಯ ಉದ್ದೇಶದಿಂದ ಆಗಬಹುದು. ಇದರ ಬಗ್ಗೆ ಜನ ತೀರ್ಮಾನದಲ್ಲಿ ಉತ್ತರ ಕೊಟ್ಟಿದ್ದಾರೆ.

6-45 ಪಿ. ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ತಾವು ಸಂಸದೀಯ ವ್ಯವಹಾರ ಮಂತ್ರಿಗಳು ಹಾಗೂ ಕಾಂಗ್ರೆಸ್ಸಿನ ಬಹಳ ದೊಡ್ಡ ಮುಖಂಡರಾಗಿದ್ದು, ಇದರಲ್ಲಿ ತಿಕೋಟಾದ ಪ್ರಸ್ತಾಪ ಇಲ್ಲಿ ಬೇಕಾಗಿರಲಿಲ್ಲ. ಅವರು ಪಾರ್ಟಿಯ ಕಂಡೀಷನ್‌ಗೆ ಒಪ್ಪಿಗೆ ಆಗಲಿಲ್ಲ. ಅವರು ಬುದ್ಧಿವಂತರು ಈಗ ತಿಕೋಟದಲ್ಲಿ ನಿಮ್ಮ ಸರ್ಕಾರದ ಮಂತ್ರಿಗಳು ಹೋಗಿ ಪ್ರಚಾರ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ಹೋಗಿ ಪ್ರಚಾರ ಮಾಡಿದ್ದಾರೆ. ನೀವು 3500 ಮತದ ಅಂತರದಲ್ಲಿ ಗೆದ್ದಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ವಿ. ಪಿ. ಸಿಂಗ್‌ರವರು ಸಹ ಬಿಜಾಪುರಕ್ಕೆ ಹೋದಾಗ ಕೂಡ ಅಲ್ಲಿ ಯಾವುದೇ ಪ್ರಭಾವ ಮತದಾರರ ಮೇಲೆ ಬೀಳಲಿಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ವಿ. ಪಿ. ಸಿಂಗ್‌ರವರು ಬಿಜಾಪುರದಲ್ಲೆಲ್ಲಾ ಸುತ್ತಾಡಿ ಇವತ್ತಿನ ದಿವಸ ಈ ಪರಿಸ್ಥಿತಿಗೆ ಬಂದರೆ, ಏನು ಹೇಳಬೇಕೋ ನನಗೆ ಅರ್ಥ ವಾಗುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ರೈತ ಸಂಘದವರು 7 ಸಾವಿರ ಓಟುಗಳನ್ನು ತೆಗೆದುಕೊಂಡಿದ್ದಾರೆ ನಾವು 28 ಸಾವಿರ ಓಟುಗಳನ್ನು ತೆಗೆದುಕೊಂಡಿದ್ದೇವೆ. ನೀವು ನಮಗಿಂತ ಮೂರುವರೆ ಸಾವಿರ ಓಟುಗಳನ್ನು ಜಾಸ್ತಿ ತೆಗೆದುಕೊಂಡಿದ್ದೀರಿ. ಇಷ್ಟೆಲ್ಲಾ ತರಾತುರಿ ಮಾಡಿ ಮೂರುವರೆ ಸಾವಿರ ಓಟುಗಳನ್ನು ಜಾಸ್ತಿ ತೆಗೆದುಕೊಂಡಿದ್ದೀರಿ. ನೀವು ಗೆದ್ದಿದ್ದೀರಿ, ನಾವು ಇಲ್ಲವೆಂದು ಹೇಳುವುದಿಲ್ಲ. ತಾವು ಏನು ಕೇಂದ್ರ ಸರ್ಕಾರದ ನೀತಿ ಎಂದು ಹೇಳುತ್ತೀರಿ, ಸಾಲ ಮನ್ನಾ ಬಗ್ಗೆ ರಾಜ್ಯ ಸರ್ಕಾರದ ನಿರ್ಧಾರ ಏನು ಇದೆ ಇದನ್ನೆಲ್ಲ ಯಡಿಯೂರಪ್ಪನವರು ಹಾಗೂ ಅವರ ಸ್ನೇಹಿತರು ಅರ್ಥ ಮಾಡಿಕೊಳ್ಳಬಲ್ಲರು. ಅವರಿಗೂ ಇತಿ ಮಿತಿ ಗೊತ್ತಿದೆ. ಜನರು ಓಟು ಕೊಟ್ಟಿದ್ದಾರೆಂಬುದು ಅವರಿಗೂ ಸಹಿತ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಯಡಿಯೂರಪ್ಪನವರಿಗೆ ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ. ರಾಜಕೀಯವಾಗಿ ಯಾವಾಗಲೂ ಈ ವಿಷಯವನ್ನು ಇಡಬೇಕೆಂದು ಅವರಿಗೆ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಹೊರಗಿನ ಶಕ್ತಿಗಳು ಏನು ? ಮೇಲಿನಿಂದ ಅವರ ಆದೇಶ ಏನು ? ಅದಕ್ಕೂ ನಮಗೂ ಸಂಬಂಧವಿಲ್ಲ; ಮತ್ತು ಅವರ ಪಕ್ಷದ ಜೊತೆಯಲ್ಲಿ ಶಾಶ್ವತವಾಗಿ ಆಕಾಶ ಭೂಮಿಯ ಎತ್ತರಕ್ಕೆ ನಮಗೂ ಅವರಿಗೂ ಮಧ್ಯ ಭಿನ್ನಾಭಿಪ್ರಾಯವಿದೆ. ಮಾನ್ಯ ಪಾಟಾಳ್ ನಾಗರಾಜ್‌ರವರು ವಿರೋಧ ಪಕ್ಷದ ಸದಸ್ಯರು. ಅವರು ಪ್ರತಿಭಟನೆಯನ್ನು ಮಾಡಿ ಹೊರಟು ಹೋದರು. ನಾನು ಈ ಪ್ರೊಸೀಡಿಂಗ್ಸ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿ ಹೋದರು. ಇನ್ನೂ ನಾಲ್ಕಾರು ಜನರು ಹೋಗುತ್ತಾರೆ. ನಮ್ಮಲ್ಲಿಯೂ ಕೂಡ ಅನೇಕ ಮಾನ್ಯ ಸದಸ್ಯರು ನಾವೂ ಕೂಡ ಹೋಗುತ್ತೇವೆಂದು ನನಗೆ ಹೇಳುತ್ತಿದ್ದಾರೆ. ನಾವು ಈ ವಿರೋಧ ಪಕ್ಷದಲ್ಲಿ ಕೂತು ಯಾವರೀತಿ ಕೆಲಸ ಮಾಡಬೇಕು ? ನಾವು ಇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವರೂ ಕೂಡ ಒಂದು ಹೆಜ್ಜೆಯನ್ನು ಹಿಂದೆ ಸರಿದಿದ್ದಾರೆ. ಅವರೂ ಒಂದು ದಿವಸ ಕುಳಿತಿದ್ದರು. ಅವರು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಿದ್ಧವಾಗಿರಬಹುದು. ಆದ್ದರಿಂದ ಮಾನ್ಯ ಉಪಾಧ್ಯಕ್ಷೀಣಿಯವರೆ, ತಾವು ಎಲ್ಲ ಪಕ್ಷಗಳ ಮುಖಂಡರನ್ನೂ ಕರೆಸಬೇಕು. ರೈತರ ಸಾಲದ ವಸೂಲಾತಿಯ ವಿಚಾರದಲ್ಲಿ ಅನೇಕ ಸಮಸ್ಯೆಗಳಾಗಿವೆ ಎಂದು ಅವರ ಭಾಷಣದಲ್ಲಿ ಹೇಳಿದ್ದಾರೆ. ಇದರಿಂದಾಗಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಒಂದು ಭರವಸೆಯನ್ನು ಕೊಟ್ಟರೆ ಅವರು ಧರಣಿ ಯನ್ನು ನಿಲ್ಲಿಸಬಹುದು. ಇದಕ್ಕೆ ತಾವು ಪ್ರಯತ್ನಪಡಬೇಕು.

ಶ್ರೀ ಎಸ್. ಹೆಚ್. ಕೌಜಲಗಿ :– ಮಾನ್ಯ ವೀರೇಂದ್ರ ಪಾಟೀಲರು ಹಿಂದೆ ಹೇಳಿದ್ದರು. ಏನೆಂದರೆ, ನೀವು ಆದ್ವಾನಿಯವರಿಗೆ ಹೋಗಿ ಹೇಳಿ ಅಂತ. ತಾವು ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿ. ನೀವು ಹೋಗಿ ಆದ್ವಾನಿಯವರಿಗೆ ಹೇಳಿ ಅವರ ಕಡೆಯಿಂದ ಹೇಳಿಸಿ ಕೇಂದ್ರ ಸರ್ಕಾರದಿಂದ ಸಾಲವನ್ನು ಸೂಟ್ ಮಾಡಿಸ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ವೀರೇಂದ್ರ ಪಾಟೀಲರು ಹೇಳಿದ್ದರು. ಇವತ್ತು ನಿಮ್ಮ ಪಕ್ಷ ಅಲ್ಲಿದೆ, ನೀವು ಏನು ಮಾಡಿದಿರಿ ?

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಉಪಾಧ್ಯಕ್ಷೀಣಿಯವರೆ, ನಾನು ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ಸಮಸ್ಯೆಗಳೇನಾದರೂ ಉದ್ಭವವಾಗಿದ್ದರೆ ನಾವು ಅವರ ಜೊತೆಯಲ್ಲಿ ಮಾತನಾಡುವುದಕ್ಕೆ ಸಿದ್ಧವಾಗಿದ್ದೇವೆ. ನಾನು ಮಾನ್ಯ ನಾಯಕರ ಹತ್ತಿರ ಈ ಬಗ್ಗೆ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಸಾಕಷ್ಟು ಹಿರಿಯ ನಾಯಕರು. ಬಹಳ ಬುದ್ಧಿವಂತರು. ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಮೆಚ್ಚುಗೆ ಇದೆ. ಆದುದರಿಂದ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿಗೆ ಈ ಧರಣಿ ಸಾಕು. ನಾಳೆ ಬೆಳಿಗ್ಗೆ ಮಾತಾಡೋಣ. ರೈತರ ಸಮಸ್ಯೆ ಏನಾದರೂ ಇದ್ದರೆ ಸರ್ಕಾರದವರು ಮುಕ್ತ ಮನಸ್ಸಿನಿಂದ

ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ದಯವಿಟ್ಟು ಎದ್ದುಬನ್ನಿ. ನಾಳೆ ಬೆಳಿಗ್ಗೆ ಪುನಃ ಸಭೆ ಸೇರುವುದಕ್ಕೆ ಮುಂಚೆ ನಾವೆಲ್ಲರೂ ಕೂತು ಚರ್ಚೆ ಮಾಡೋಣ ಎಂದು ಇನ್ನೊಮ್ಮೆ ಅವರಲ್ಲಿ ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಧರಣಿ ಕೂತಿದ್ದ ಮಾನ್ಯ ಸದಸ್ಯರು ಮೇಲೆದ್ದರು.)

ಉಪಾಧ್ಯಕ್ಷೀಣಿಯವರು :– ಇಲ್ಲಿಗೆ ಸಭೆಯನ್ನು ಮುಕ್ತಾಯ ಮಾಡಿ ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಿದ್ದೇನೆ.

(ಸದನವು ಸಾಯಂಕಾಲ 6–53 ಗಂಟೆಗೆ ಮುಕ್ತಾಯವಾಗಿ ಮತ್ತೆ ಮರುದಿನ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(† ಈ ಚಿಪ್ಪೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

KARNATAKA LEGISLATIVE ASSEMBLY

(Ninth Assembly)

FOURTH SESSION

(*Adjourned Meetings*)

THE KARNATAKA CONTRACT CARRIAGES (ACQUISITION) (AMENDMENT) BILL 1990

(L. A. Bill No. 27 of 1990)

A Bill further to amend the Karnataka Contract Carriages (Acquisition) Act, 1976.

Whereas it is expedient further to amend the (Karnataka Contract Carriages (Acquisition) Act, 1976 Karnataka Act 21 of 1976) for the purposes hereinafter appearing ;

Be it enacted by the Karnataka State Legislature in the Forty–first year of Republic of India as follows :–

1 **Short title and Commencement:-**(1) This Act may be called the Karnataka Contract Carriages (Acquisition) (Amendment) Act, 1990.

(2) Section 1 shall come into force at once, Section 2 shall be deemed to have come into force with effect from the First day of September, 1990 and Section 3 shall be deemed to have come into force with effect from the Thirtieth day of August 1990.